O.S. ನಂಬರಃ 23/2022
ಪಿ. ಡಬ್ಲ್ಯೂಃ 1

ದಿಃ 27-07-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ 2 ನೇ ಪ್ರತಿವಾದಿಯ ಪರ ವಕೀಲರಾದ ಶ್ರೀ ಎ.ಎನ್.ಟಿ ರವರಿಂದಃ

ಬಾಸ್ಗೋಡ ಗ್ರಾಮದ ಸರ್ವೆ ನಂ.74/7 ಅ+7 ಬ ಇದು ಯಾರ ಹೆಸರನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ನನ್ನ ಹೆಸರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಜಮೀನನ್ನು ದಾವೆಯಲ್ಲಿ ಸೇರಿಸಿದ್ದು ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಆಸ್ತಿಯನ್ನು ನನ್ನ ಅಜ್ಜಿಯು ಬೇರೆಯವರಿಂದ ಖರೀದಿ ಮಾಡಿಕೊಂಡು ನನ್ನ ತಾಯಿಗೆ ಕೊಟ್ಟಿದ್ದು, ನನ್ನ ತಾಯಿಯ ಮುಖಾಂತರ ನನಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ಅಜ್ಜಿಯು ಸದರಿ ಜಮೀನನ್ನು ಖರೀದಿ ಮಾಡಿದರ ಬಗ್ಗೆ ಹಾಗೂ ನಿಮ್ಮ ತಾಯಿಗೆ ಆ ಜಮೀನನ್ನು ಕೊಟ್ಟಿದ್ದರ ಬಗ್ಗೆ ಯಾವುದಾದರೂ ದಾಖಲಾತಿಗಳನ್ನು ನೋಡಿರುತ್ತೀರಾ ಎಂದರೆ ಸಾಕ್ಷಿಯು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ. ಸದರಿ ಜಮೀನಿಗೆ

ಸಂಬಂಧಪಟ್ಟಂತೆ ನಿಮ್ಮ ತಾಯಿಯು ನಿಮ್ಮ ಪರವಾಗಿ ಮೃತ್ಯು ಪತ್ರವನ್ನು ಬರೆದುಕೊಟ್ಟಿದ್ದಾಗಲಿ ಅಥವಾ ಸಬ್ ರಜಿಸ್ಟ್ರರ ಕಚೇರಿಯಲ್ಲಿ ನೊಂದಣಿ ಮಾಡಿಕೊಟ್ಟಿದ್ದಾಗಲಿ ಇರುತ್ತದೆಯಾ ಎಂದರೆ ಸಾಕ್ಷಿಯು ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಜಮೀನು ನನ್ನ ಸ್ವಯಾರ್ಜಿತ ಜಮೀನು ಎಂದು ತೋರಿಸಲು ಮಾನ್ಯ ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ. ಸದರಿ ಜಮೀನಿಗೆ ಸಂಬಂಧಪಟ್ಟಂತೆ ಸದರಿ ಜಮೀನು ಈಗಲೂ ಸಹ ಕುಟುಂಬದ ಆಸ್ತಿಯಾಗಿದ್ದು, ಯಾವುದೇ ವಾಂಟಣಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನಿಗೆ ಸಂಬಂಧಪಟ್ಟಂತೆ ನಿಮ್ಮ ತಾಯಿಯು ನಿಮ್ಮ ಪರವಾಗಿ ಯಾವುದೇ ನೊಂದಾಯಿತ ಕಾಗದ ಪತ್ರಗಳ ಮುಖಾಂತರ ಹಸ್ತಾಂತರ ಮಾಡಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ.

2. ಅದರಲ್ಲಿರುವ ಮನೆಯನ್ನು ಯಾರು ಕಟ್ಟಿಸಿದ್ದು ಎಂದರೆ ಸಾಕ್ಷಿಯು ನಮ್ಮ ತಂದೆಯವರು ಕಟ್ಟಿಸಿದ್ದು, ನನ್ನ ತಾಯಿಯು ಮರಣಹೊಂದಿದ ನಂತರ ನಾನೇ ಸಂಪೂರ್ಣವಾಗಿ ರಿಪೇರಿ ಮಾಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಮನೆಗೆ ಸಂಬಂಧಪಟ್ಟಂತೆ ನಿಮ್ಮ ತಂದೆಯಾಗಲಿ ಅಥವಾ ನಿಮ್ಮ ತಾಯಿಯಾಗಲಿ ನಿಮ್ಮ ಪರವಾಗಿ ಯಾವುದೇ ಮೃತ್ಯು ಪತ್ರವನ್ನಾಗಲಿ ಅಥವಾ ನೊಂದಾಯಿತ ಪತ್ರವನ್ನಾಗಲಿ ಮಾಡಿಕೊಟ್ಟಿದ್ದು ಇರುವುದಿಲ್ಲ ಎಂದರೆ ಮೃತ್ಯು ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ಮೃತ್ಯು ಪತ್ರದ ಪ್ರಕಾರ ಸದರಿ ಆಸ್ತಿಯನ್ನು ನಿಮ್ಮ ಹೆಸರಿಗೆ ರೆಕಾರ್ಡ್‌ಲ್ಲಿ ಮಾಡಿಕೊಳ್ಳಲು ಅರ್ಜಿಯನ್ನು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ನನ್ನ ತಾಯಿಯು ಜೀವಂತ ಇರುವಾಗಲೇ ಅರ್ಜಿಯನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಅಂದರೆ ನಿಮ್ಮ ತಾಯಿಯು ಜೀವಂತ ಇರುವಾಗಲೇ ಮೃತ್ಯು ಪತ್ರದಂತೆ ನಿಮ್ಮ ಹೆಸರು ನೋಂದಾಯಿಸಲು ಅರ್ಜಿಯನ್ನು ಕೊಟ್ಟಿರುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ನಿಮ್ಮ ತಾಯಿಯು ನಿಮ್ಮ ಪರವಾಗಿ ಮಾಡಿಟ್ಟ ಮೃತ್ಯು ಪತ್ರದ ಪ್ರಕಾರ ನಿಮ್ಮ ಹೆಸರು ದಾಖಲು ಆಗಿರುತ್ತದೆಯಾ ಎಂದರೆ ಹೌದು ಎಂದು ನುಡಿಯುತ್ತಾರೆ. ಮೃತ್ಯು ಪತ್ರ ಹಾಗೂ ಮೃತ್ಯು ಪತ್ರದ ಆಧಾರದ ಮೇಲೆ ಆದಂತಹ ಮುಟೇಶನ ಎಂಟ್ರಿಯ ಎಲ್ಲ ದಾಖಲಾತಿಗಳು ನಿಮ್ಮ ಹತ್ತಿರ ಇರುತ್ತವೆಯಾ ಎಂದರೆ ಇರುತ್ತವೆ ಎಂದು ನುಡಿಯುತ್ತಾರೆ. ಸರ್ವೆ ನಂ.74/7 ಅ+7 ಬಿ ಹಾಗೂ ಅದರಲ್ಲಿರುವ ಮನೆ ಸಂಖ್ಯೆ 22 ರಲ್ಲಿ ನನಗೂ ಹಾಗೂ ಪ್ರತಿವಾದಿಯರಿಗೆ ಸಮಪಾಲು ಬರುತ್ತದೆ ಎಂದರೆ ಸರಿಯಲ್ಲ.

3. ನಿಮ್ಮ ತಂದೆಯವರು ಯಾವ ಸಾಲಿನಲ್ಲಿ ಮರಣಪಟ್ಟಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಾಯಿಯು ಮರಣಪಟ್ಟ ನಂತರ ನನ್ನ ತಂದೆಯವರು ಮರಣಪಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ತಂದೆ ಹಾಗೂ ತಾಯಿ ಮರಣಪಟ್ಟ ನಂತರ ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಪಹಣಿ ಪತ್ರಿಕೆಗಳಲ್ಲಿ ನಿಮ್ಮ ತಂದೆಯ ಹೆಸರು ಇತ್ತಾ ಎಂದರೆ ಸಾಕ್ಷಿಯು ನಮ್ಮ ತಂದೆಯ ಹೆಸರು ಇರುವುದಿಲ್ಲ, ಅವರು ತಮ್ಮ ಜೀವಿತಾಕಾಲದಲ್ಲಿ ಅವರು

ಭಾಗವನ್ನು ಮಾಡಿ ಪಹಣಿ ಪತ್ರಿಕೆಗಳಲ್ಲಿ ನಮ್ಮ ಎಲ್ಲರ ಹೆಸರುಗಳು ದಾಖಲಾಗಿದ್ದವು ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರು ತೀರಿಕೊಳ್ಳುವ ಪೂರ್ವದಲ್ಲಿ ನಿಮ್ಮ ಎಲ್ಲರ ಹೆಸರುಗಳು ರೆಕಾರ್ಡ ಉತಾರಗಳಲ್ಲಿ ದಾಖಲಾಗಿದ್ದವು ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಅವರು ಹಾಜರುಪಡಿಸಿದ ದಾಖಲಾತಿಗಳನ್ನು ತೋರಿಸಲಾಗಿ ನಿಮ್ಮ ತಂದೆಯ ಹೆಸರಿಗೆ ಇದ್ದ ದಾಖಲಾತಿಗಳನ್ನು ತೋರಿಸಿ ಎಂದು ಕೇಳಿದ್ದಕ್ಕೆ ಸಾಕ್ಷಿಯು ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ.

4. ಕನ್ನಡ ಓದಲು ಬರೆಯಲು ಬರುತ್ತದೆಯಾ ಎಂದರೆ ಬರುತ್ತದೆ ಎಂದು ನುಡಿಯುತ್ತಾರೆ. ನಿಪಿ–9 ದಾಖಲಾತಿಯನ್ನು ನೀವೆ ಹಾಜರುಪಡಿಸಿರುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ನಿಮ್ಮ ಮತ್ತು ಪ್ರತಿವಾದಿಯರ ಮಧ್ಯ ತೊಂಡಿ ವಾಂಟಣಿ ಆಗಿರುತ್ತದೆ ಎಂದು ತೋರಿಸಲು ದಾಖಲಾತಿಯನ್ನು ಹಾಜರುಪಡಿಸಿರುತ್ತೀರಿ ಎಂದರೆ ಸರಿ. ಸದರಿ ದಾಖಲಾತಿಯನ್ನು ನೀವು ಮೂರು ಜನರು ಮಾಡಿಕೊಂಡ ತೊಂಡಿ ವಾಂಟಣಿಯಂತೆ ದಾಖಲಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾವು ಸಹಿಯನ್ನು ಹಾಕಿರುವುದಿಲ್ಲ ಎಂದು ನುಡಿಯುತ್ತಾರೆ. ಮುಟೇಶನ್ ಎಂಟ್ರಿ ನಂ.1127 ನೆದ್ದನ್ನು ಮಂಜೂರು ಮಾಡುವ ಸಮಯದಲ್ಲಿ ನೀವೇನಾದರೂ ತಕರಾರನ್ನು ಸಲ್ಲಿಸಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಆಗ

ನಾವು ಎಲ್ಲರೂ ಒಟ್ಟು ಕುಟುಂಬದಲ್ಲಿ ಇದ್ದು, ನಮ್ಮ ಮಧ್ಯ ಯಾವುದೇ ತಕರಾರು ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಕೊಟ್ಟ ಪತ್ರಿಕೆಯ ಪ್ರಕಾರ ಯಾವ ಯಾವ ಜಮೀನುಗಳನ್ನು ಯಾರ ಯಾರ ಪಾಲಿಗೆ ಹೋಗಬೇಕು ಎಂದು ತೊಂಡಿ ವಾಂಟಣಿ ಪ್ರಕಾರ ದಾಖಲಾಗಿರುತ್ತದೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ನಮೂದಾದ ಬೊಮ್ಮಾ ಬೊಮ್ಮಣ್ಣ ನಾಯಕ ಮತ್ತು ಉಮಾ ರಾಮಚಂದ್ರ ಮಿರಾಶಿ ಇವರು 1 ಮತ್ತು 2 ನೇ ಪ್ರತಿವಾದಿಯರು ಎಂದರೆ ಸರಿ. ಸದರಿ ಮುಟೇಶನ್ ಎಂಟ್ರಿಯ ಪ್ರಕಾರ ಸರ್ವೆ ನಂ.72/1ಬ, 72/1ಡ, 72/ಇ , 72/1ಎ ಮತ್ತು 86/2 ನೆ ಆಸ್ತಿಗಳು ನಿಮ್ಮ ಹೆಸರಿಗೆ ಪ್ರತ್ಯೇಕವಾಗಿ ಪಹಣಿ ಪತ್ರಿಕೆಗಳಲ್ಲಿ ದಾಖಲಾಗಿತ್ತು ಎಂದರೆ ಸರಿ. ಸದರಿ ಜಮೀನುಗಳಿಗೆ ಸಂಬಂಧಪಟ್ಟು ನಿಮ್ಮ ಹೆಸರನ್ನು ಬಿಟ್ಟರೆ ಬೇರೆ ನಿಮ್ಮ ಸಹೋದರಿಯರ ಹೆಸರಿನಲ್ಲಿ ದಾಖಲಾಗಿರುವುದಿಲ್ಲ ಎಂದರೆ ಸರಿ. ಸರ್ವೆ ನಂ.34/3ಅ +3ಕ+3ಡ+3ಇ 1 ನೇ ಜಮೀನು 2 ನೇ ಪ್ರತಿವಾದಿಯ ಹೆಸರಿಗೆ ದಾಖಲಾಗಿರುತ್ತದೆ ಎಂದರೆ ಸರಿ. ಸರ್ವೆ ನಂ.86/2 ಒಟ್ಟು ಕ್ಷೇತ್ರ 33 ಗುಟೆಯಲ್ಲಿ 1 ನೇ ಪ್ರತಿವಾದಿಯ ಹೆಸರಿಗೆ 25 ಗುಂಟೆ ಜಮೀನು ದಾಖಲಾಗಿರುತ್ತದೆ ಎಂದರೆ ಸರಿ. ಈ ರೀತಿ ನಿಮ್ಮ ಹಾಗೂ ನಿಮ್ಮ ಸಹೋದರಿಯರ ಹೆಸರುಗಳು ತಪ್ಪಾಗಿ ಪಹಣಿಪತ್ರಿಕೆಗಳಲ್ಲಿ ದಾಖಲಾಗಿವೆ ಎಂದು ಯಾವುದೇ ಸಕ್ಷಮ ಪ್ರಾಧಿಕಾರದ ಮುಂದೆ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನಗೆ ಈಗ ತಿಳಿದು ಬಂದಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ.72/1 ಬ 12 ಗುಂಟೆ ಜಮೀನು ಖುಷ್ಕಿ ಜಮೀನು ಆಗಿದ್ದು, ಭತ್ತ ಬೆಳೆಯುವಂತೆ

ಜಮೀನು ಎಂದರೆ ಸರಿ. ಅದನ್ನು ನೀವೆ ಸಾಗುವಳಿ ಮಾಡಿಕೊಂಡು ಬಂದಿರುತ್ತೀರಿ ಎಂದರೆ ಸರಿ. ಅದರಲ್ಲಿ ಬೆಳೆಯಲಾದ ಭತ್ತವನ್ನು ನೀವೆ ತೆಗೆದುಕೊಳ್ಳುತ್ತಿದ್ದೀರಿ ಎಂದರೆ ಸಾಕ್ಷಿಯು ಎಲ್ಲರೂ ಒಟ್ಟಾಗಿ ಅನುಭವಿಸುತ್ತಿದ್ದೇವು ಎಂದು ನುಡಿಯುತ್ತಾರೆ. ರೈತ ಸಹಕಾರಿ ಸಂಘ ಬಾಸ್ಗೋಡ ಇವರಲ್ಲಿ ಸಾಲವನ್ನು ಪಡೆದುಕೊಂಡಿದ್ದು, ಸಾಲವನ್ನು ಪಡೆಯುವ ಸಂದರ್ಭದಲ್ಲಿ ಸರ್ವೆ ನಂ.72/1ಬ, 72/1ಡ, 72/1ಇ, 72/1ಅ ಮತ್ತು ಸರ್ವೆ ನಂ.86/2, ಸರ್ವೆ ನಂ.122 ನೇ ಜಮೀನುಗಳನ್ನು ಸಾಲ ಪಡೆಯುವ ಸಂದರ್ಭದಲ್ಲಿ ಬೋಜಾ ದಾಖಲಿಸಲು ಕೊಟ್ಟಿರುತ್ತೇನೆ ಎಂದರೆ ಸರಿ. ಯಾವ ಸಾಲಿನಲ್ಲಿ ಸಾಲವನ್ನು ಪಡೆದುಕೊಂಡಿರುತ್ತೀರಿ ಎಂದರೆ ಸಾಕ್ಷಿಯು ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ತಾವು ಹಾಜರುಪಡಿಸಿದ ದಾಖಲಾತಿಗಳನ್ನು ತೋರಿಸಲಾಗಿ ಸದರಿ ಜಮೀನುಗಳ ಪಹಣಿ ಪತ್ರಿಕೆಗಳಲ್ಲಿ 2005-06 ನೇ ಸಾಲಿನಲ್ಲಿ ಬೋಜಾವನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಪಹಣಿ ಪತ್ರಿಕೆಯಲ್ಲಿ ಕಬ್ಜೆದಾರರ ಕಾಲಂ ನಲ್ಲಿ ಯಾರು ಹೆಸರು ಇರುತ್ತದೆಯೊ ಅವರಿಗೆ ಮಾತ್ರ ಬೋಜಾ ದಾಖಲಿಸಿ ಸಾಲವನ್ನು ಪಡೆದುಕೊಳ್ಳುವ ಹಕ್ಕು ಇರುತ್ತದೆ ಎಂದರೆ ಸರಿ. ನಿಮ್ಮ ಹೆಸರಿಗೆ ಆದಂತಹ ಜಮೀನುಗಳನ್ನು ನೀವೆ ಸಾಗುವಳಿ ಮಾಡಿಕೊಂಡು ಬರುತ್ತಿದ್ದೀರಿ ಎಂದರೆ ಸಾಕ್ಷಿಯು ಎಲ್ಲ ಆಸ್ತಿಗಳನ್ನು ನಾನೇ ಸಾಗುವಳಿ ಮಾಡಿಕೊಂಡು ಬರುತ್ತಿದ್ದೇನೆ ಎಂದು ನುಡಿಯುತ್ತಾರೆ. ಎಲ್ಲ ಆಸ್ತಿಗಳನ್ನು ನೀವೇ ಸಾಗುವಳಿ ಮಾಡಿಕೊಂಡು ಬರುತ್ತೀದ್ದೀರಿ ಎಂದು ತೋರಿಸಲು ನಿಮ್ಮ ಹತ್ತಿರ ಸಾಕ್ಷಿ ಆಧಾರಗಳು ಇರುತ್ತೆವೆಯಾ ಎಂದರೆ ಸಾಕ್ಷಿಯು ಅದನ್ನು ಹೇಳಲು ಆಗುವುದಿಲ್ಲ, ನಾನೇ

ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ನಿಮ್ಮ ಹೆಸರಿಗೆ ಆದ ಆಸ್ತಿಗಳಿಗೆ ಸಂಬಂಧಪಟ್ಟಂತೆ ಭೂ ಕಂದಾಯವನ್ನು ಯಾರು ಕಟ್ಟುತ್ತಿದ್ದಾರೆ ಎಂದರೆ ಸಾಕ್ಷಿಯು ನಾನೇ ಭರಿಸುತ್ತಿದ್ದೇನೆ ಎಂದು ನುಡಿಯುತ್ತಾರೆ. ನಿಮ್ಮ ಹೆಸರಿಗೆ ಆದ ಆಸ್ತಿಗಳಿಗೆ ಸಂಬಂಧಪಟ್ಟಂತೆ ಪ್ರಪ್ರತ್ಯೇಕವಾಗಿ ನಕಾಶೆಗಳು ಆಗಿರುತ್ತವೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ. ನಿಮ್ಮ ಹೆಸರಿಗೆ ಬಂದಂತಹ ಜಮೀನುಗಳನ್ನು ಒಡೆಯದೇ ಪೂರ್ತಿಯಾದ ಕ್ಷೇತ್ರವನ್ನು ನಿಮಗೇ ಕೊಡಲಾಗಿದೆ ಎಂದರೆ ಸರಿ. ಹಾಗೆ 2 ನೇ ಪ್ರತಿವಾದಿಗೂ ಸಹ ಅವರಿಗೆ ಕೊಟ್ಟಂತಹ ಜಮೀನನ್ನು ಪೂರ್ತಿ ಕ್ಷೇತ್ರವನ್ನು ಕೊಟ್ಟಿರುತ್ತಾರೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ. ನನ್ನ ಮತ್ತು ಪ್ರತಿವಾದಿಯರಿಗೆ ಕೊಟ್ಟಂತಹ ಆಸ್ತಿಗಳಿಗೆ ಸಂಬಂಧಪಟ್ಟಂತೆ ಸರ್ವೆ ನಕಾಶೆಗಳನ್ನು ನೋಡಿರುತ್ತೀರಾ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಮ್ಮ ತಂದೆಯಿಂದ ಬಂದಂತಹ ದಾವಾ ಆಸ್ತಿಗಳನ್ನು 1990 ನೇ ಸಾಲಿನಲ್ಲಿ ನಮ್ಮ ಮಧ್ಯ ತೊಂಡಿ ವಾಂಟಣಿಯನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಆ ಪ್ರಕಾರ ರೆಕಾರ್ಡಗಳಲ್ಲಿ ಹೆಸರು ದಾಖಲೆ ಮಾಡಲು ವರದಿಯನ್ನು ಕೊಟ್ಟಿರುತ್ತೇವೆ ಎಂದರೆ ಸರಿ. ಅದೇ ರೀತಿ ಸೂರ್ವೆ ಗ್ರಾಮದ ಜಮೀನುಗಳಿಗೆ ಸಂಬಂಧಪಟ್ಟಂತೆ ನನ್ನ ಮತ್ತು ಪ್ರತಿವಾದಿಯರ ಹೆಸರನ್ನು ಕೊಟ್ಟಿರುತ್ತೇವೆ ಎಂದರೆ ಸಾಕ್ಷಿಯು ನಾವು ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ–10 ಮಂಜೂರು ಆಗಲು ಯಾರು ವರದಿಯನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯ ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸೂರ್ವೆ ಗ್ರಾಮದ ಜಮೀನು ಯಾರ ಪಾಲಿಗೆ ಹೋಗಿರುತ್ತದೆ ಎಂದರೆ ಸಾಕ್ಷಿಯು ನನ್ನ ಮತ್ತು 1 ನೇ

ಪ್ರತಿವಾದಿಯ ಹೆಸರಿಗೆ ಹೋಗಿರುತ್ತದೆ ಎಂದು ನುಡಿಯುತ್ತಾರೆ. ಸೂರ್ವೆ ಗ್ರಾಮದ ಜಮೀನಿಗೆ ಸಂಬಂಧಪಟ್ಟಂತೆ ನನ್ನ ಮತ್ತು 1 ನೇ ಪ್ರತಿವಾದಿಯ ಹೆಸರು ಮಾತ್ರ ಇದ್ದು, 2 ನೇ ಪ್ರತಿವಾದಿಯ ಹೆಸರು ಇರುವುದಿಲ್ಲ ಎಂದರೆ ಸರಿ. ಸೂರ್ವೆ ಗ್ರಾಮದ ಜಮೀನಿಗೆ ಸಂಬಂಧಪಟ್ಟಂತೆ ಮಂಜೂರಾದ ಮುಟೇಶನ್ ಎಂಟ್ರಿ ಮೇಲೆ ಕುಮಟಾ ಎಸಿ ರವರ ಮುಂದೆ ಯಾವುದೇ ಮೆಲ್ಮನವಿಯನ್ನು ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾವು ಯಾವುದೇ ವಾಂಟಣೆಯನ್ನು ಮಾಡಿಕೊಂಡಿರುವುದಿಲ್ಲ, ಆದ ಕಾರಣ ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ ಎಂದು ನುಡಿಯುತ್ತಾರೆ.

5. 1985–1990 ನೇ ಸಾಲಿನಲ್ಲಿ ಬಾಸ್ಗೋಡದಲ್ಲಿ ಸಂಘ ಇದ್ದು, ಅಕ್ಕಪಕ್ಕದಲ್ಲಿ ಒಂದೆರಡು ಅಂಗಡಿಗಳು ಇದ್ದವು ಎಂದರೆ ಸಾಕ್ಷಿಯು ಬಹಳಷ್ಟು ಅಂಗಡಿಗಳು ಇದ್ದವು ಎಂದು ನುಡಿಯುತ್ತಾರೆ. ಎಷ್ಟು ಅಂಗಡಿಗಳು ಹಾಗೂ ಯಾರ ಯಾರ ಅಂಗಡಿಗಳು ಇದ್ದವು ಎಂದರೆ ಸಾಕ್ಷಿಯು ಅದನ್ನು ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಬಾಸ್ಗೋಡದಲ್ಲಿರುವ ಮನೆಯಿಂದ ಗಂಗಾವಳಿ ರಸ್ತೆಗೆ ಅರ್ಧ ಕಿ.ಮೀ ದೂರವಾಗುತ್ತದೆ ಎಂದರೆ ಇರಬಹುದು. ಆ ಸಮಯದಲ್ಲಿ ಬಾಸ್ಗೋಡ ಗ್ರಾಮದಲ್ಲಿ ಎಲ್ಲ ಜಮೀನುಗಳಿಗೆ ಒಂದೇ ಮಾರುಕಟ್ಟೆ ಬೆಲೆ ಇತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆದರೆ ರಸ್ತೆ ಪಕ್ಕ ಇರುವ ಜಮೀನುಗಳಿಗೆ ಜಾಸ್ತಿ ಬೆಲೆ ಇರುತ್ತದೆ ಎಂದು ನುಡಿಯುತ್ತಾರೆ. 1990 ನೇ ಸಾಲಿನಲ್ಲಿ ಸರಕಾರದವರು ಮುಧ್ರಾಂಕ ಶುಲ್ಕವನ್ನು ಪಾವತಿಸುವ ಸಲುವಾಗಿ ಒಂದೇ

ಮಾರುಕಟ್ಟೆ ಬೆಲೆಯನ್ನು ನಿಗದಿ ಮಾಡಿರುತ್ತಾರೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ. ನಿಮ್ಮ ಪ್ರಕಾರ ರಸ್ತೆಯ ಲಗ್ತ ಇರುವ ಜಮೀನುಗಳಿಗೆ ಹಾಗೂ ಒಳಗಡೆ ಇರುವ ಜಮೀನುಗಳಿಗೆ ಮಾರುಕಟ್ಟೆಯ ಮೌಲ್ಯಕ್ಕೆ ಎಷ್ಟು ವ್ಯತ್ಯಾಸ ಇತ್ತು ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ರಸ್ತೆಯ ಲಗ್ತ ಇರುವ ಜಮೀನುಗಳಿಗೆ ಜಾಸ್ತಿ ಕಿಮ್ಮತ್ತು ಇತ್ತು ಎಂದು ತೋರಿಸಲು ನಿಮ್ಮ ಹತ್ತಿರ ಏನಾದರೂ ದಾಖಲಾತಿಗಳು ಇರುತ್ತವೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಇದರ ಬಗ್ಗೆ ತಿಳುವಳಿಕೆ ಇರುವುದಿಲ್ಲ ಎಂದು ನುಡಿಯುತ್ತಾರೆ. ರಸ್ತೆಯ ಲಗ್ತ ಇರುವ ಜಮೀನುಗಳಿಗೆ ಜಾಸ್ತಿ ಕಿಮ್ಮತ್ತು ಇರುವ ಬಗ್ಗೆ ತಹಶೀಲ್ದಾರ ಕಚೇರಿ ಹೋಗಿ ಏನಾದರೂ ಚೌಕಾಸಿ ವಗೈರೆ ಮಾಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಅಕ್ಕಪಕ್ಕದವರು ಹೇಳಿರುವುದನ್ನು ಕೇಳಿರುತ್ತೇನೆ. 1990 ನೇ ಸಾಲಿನಿಂದ ದಾವಾ ದಾಖಲಾಗುವ ಸಮಯದವರೆಗೂ ಮಾಡಿಕೊಂಡಿರುವ ತೊಂಡಿ ವಾಂಟಣಿಯು ಸರಿಯಾಗಿ ಇರುವುದಿಲ್ಲ ಎಂದು ಪ್ರತಿವಾವದಿಯರಿಗೆ ಪತ್ರವನ್ನಾಗಲಿ ಅಥವಾ ನೋಟೀಸನ್ನು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿಯು ಕೊಟ್ಟಿರುವುದಿಲ್ಲ ನಾವು ಎಲ್ಲರೂ ಒಟ್ಟು ಕುಟುಂಬದಲ್ಲಿ ಚೆನ್ನಾಗಿಯೇ ಇದ್ದೇವು ಎಂದು ನುಡಿಯುತ್ತಾರೆ. ಯಾವಾಗಿನವರೆಗೂ ನೀವು ಎಲ್ಲರೂ ಚೆನ್ನಾಗಿ ಇದ್ದೀರಿ ಎಂದರೆ ಸಾಕ್ಷಿಯು 2018 ನೇ ಸಾಲಿನಲ್ಲಿ ನಮ್ಮ ಮಧ್ಯ ತಕರಾರು ಬಂದಿರುತ್ತದೆ ಎಂದು ನುಡಿಯುತ್ತಾರೆ.

6. 2 ನೇ ಪ್ರತಿವಾದಿಗೆ ಪಾಲು ಮಾಡಿಕೊಟ್ಟಂತಹ ಜಮೀನನ್ನು ಆಕೆಯು ಅದನ್ನು ಬಿನ್ ಶೇತಗಿಯಾಗಿ ಪರಿವರ್ತನೆ ಮಾಡಿಕೊಂಡಿರುತಾರೆ ಎಂದರೆ ನನಗೆ ಅದರೆ ಬಗ್ಗೆ ಮಾಹಿತಿ ಇರುವುದಿಲ್ಲ. ಬಿನ್ ಶೇತಗಿಯಾಗಿ ಪರಿವರ್ತನೆ ಮಾಡಿಕೊಂಡು 2 ನೇ ಪ್ರತಿವಾದಿಯು ಅಭಿವೃದ್ಧಿ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅವರು ಏನೂ ಅಭಿವೃದ್ಧಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಗೆ ಬಂದತಂತಹ ಜಮೀನನ್ನು 2 ನೇ ಪ್ರತಿವಾದಿಯ ಬಿನ್ ಶೇತಗಿಯಾಗಿ ಪರಿವರ್ತನೆ ಮಾಡಿಕೊಂಡು ಅಭಿವೃದ್ಧಿ ಪಡಿಸಿಕೊಂಡು ಅಂದಿನಿಂದ ಆಕೆಯು ಪ್ರತ್ಯೇಕವಾಗಿ ಕಬ್ಜಾ ಸಾಗುವಳಿ ಮಾಡಿಕೊಂಡು ಬಂದಿರುತ್ತಾಳೆ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಪಾಲಿಗೆ ಬಂದ ಜಮೀನನ್ನು ನಾನೇ ಪ್ರತ್ಯೇಕವಾಗಿ ಸಾಗುವಳಿ ಮಾಡಿಕೊಂಡು ಉತ್ಪನ್ನವನ್ನು ನಾನೇ ಅನುಭವಿಸಿಕೊಂಡು ಬರುತ್ತೇವೆ ಎಂದರೆ ಸಾಕ್ಷಿಯು ನಾವು ಎಲ್ಲರೂ ಸೇರಿ ಅನುಭವಿಸಿಕೊಂಡು ಬಂದಿರುತ್ತೇವೆ ಎಂದು ನುಡಿಯುತ್ತಾರೆ. 1990 ರಲ್ಲಿ ವಾಂಟಣಿ ಮಾಡಿಕೊಂಡ ನಂತರ ನಾವು ಎಲ್ಲರೂ ಸಾಮೂಹಿಕ ಕಬ್ಜಾ ವಹಿವಾಟಿ ಮಾಡಿಕೊಂಡು ಬಂದಿರುತ್ತೇವೆ ಎಂದು ನಿಮ್ಮ ವಕೀಲರಿಗೆ ಏನಾದರೂ ಹೇಳಿರುತ್ತೀರಾ ಎಂದರೆ ಸಾಕ್ಷಿಯು ನನಗೆ ಅರಿವು ಮರಿವು ಆಗಿದ್ದರಿಂದ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. 1990 ನೇ ಸಾಲಿನಲ್ಲಿ ಮಾಡಿಕೊಂಡ ವಾಂಟಣಿಯ ನಂತರ ನಮ್ಮ ನಮ್ಮ ಪಾಲಿಗೆ ಬಂದಂತಹ ಆಸ್ತಿಗಳನ್ನು ನಾವು ಪ್ರತ್ಯೇಕವಾಗಿ ಕಬ್ಜಾ ಸಾಗುವಳಿ ಮಾಡಿಕೊಂಡು ಬಂದಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸರಕಾರದ ಸಾಲವನ್ನು ಪಡೆದುಕೊಳ್ಳುವ ಸಾಲುವಾಗಿ ವಾಂಟಣಿ

ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ನೀವು ನಿಮ್ಮ ಜಮೀನುಗಳನ್ನು ಒತ್ತೆ ಇಟ್ಟು ಸಾಲವನ್ನು ಪಡೆದುಕೊಂಡ ರೀತಿಯಲ್ಲಿ ಪ್ರತಿವಾದಿಯರು ತಮ್ಮ ಪಾಲಿಗೆ ಬಂದ ಜಮೀನುಗಳನ್ನು ಒತ್ತೆ ಇಟ್ಟು ಸಾಲವನ್ನು ತೆಗೆದುಕೊಂಡಿದ್ದು ಇರುವುದಿಲ್ಲ ಎಂದರೆ ನನಗೆ ಅದರ ಬಗ್ಗೆ ಮಾಹಿತಿ ಇರುವುದಿಲ್ಲ. ನಮ್ಮ ಮಧ್ಯ ಯಾವುದೇ ತೋಂಡಿ ವಾಂಟಣಿ ಆಗಿರುವುದಿಲ್ಲ ಹಾಗೂ ಸರಕಾರದಿಂದ ಸಾಲ ಹಾಗೂ ಸೌಕರ್ಯ ಪಡೆಯಲು ಈ ರೀತಿ ವಾಂಟಣಿ ಮಾಡಿಕೊಂಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರ ಜೊತೆಗೆ ಮಾತುಕತೆ ಇರುತ್ತದೆಯಾ ಎಂದರೆ ಸಾಕ್ಷಿಯು ಬೊಮ್ಮ ಬೊಮ್ಮಣ್ಣ ನಾಯಕ ಇವರು ಹತ್ತಿರ ಮಾತನಾಡುತ್ತೇನೆ, ಆದರೆ ಉಮಾ ರಾಮಚಂದ್ರ ಮೀರಾಸಿ ಇವರು ಹತ್ತಿರ ಮಾತುಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಎಷ್ಟು ವರ್ಷಗಳಿಂದ ನಿಮ್ಮ ಮಧ್ಯ ಮಾತುಕತೆ ಇರುವುದಿಲ್ಲ ಎಂದರೆ ಸಾಕ್ಷಿಯು 2018 ನೇ ಸಾಲಿನಿಂದ ಮಾತುಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ.

7. 2 ನೇ ಪ್ರತಿವಾದಿಯು 25 ವರ್ಷಕ್ಕೂ ಮೇಲ್ಪಟ್ಟು ಲಕ್ಷ್ಮೇಶ್ವರ ಗ್ರಾಮದಲ್ಲಿ ಮನೆಯನ್ನು ಕಟ್ಟಿಕೊಂಡು ವಾಸ್ತವ್ಯ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಎಷ್ಟು ವರ್ಷಗಳಿಂದ ಎಂದು ಗೊತ್ತಿರುವುಲ್ಲ, ಆದರೆ ಮನೆ ಕಟ್ಟಿಕೊಂಡು ವಾಸ್ತವ್ಯ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ನೀವು ಅವರ ಮನೆಗೆ ಹೋಗಿರುತ್ತೀರಾ ಎಂದರೆ ಸಾಕ್ಷಿಯು 2018 ನೇ ಸಾಲಿನಲ್ಲಿ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಅಂಕೋಲಾ ಮನೆಯಿಂದ

ಬಾಸ್ಗೋಡ ಗ್ರಾಮವು ಒಂದೂವರೆ ಕಿ.ಮೀ ಆಗುತ್ತದೆ ಎಂದರೆ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.